ವಿಶ್ವವಾಣಿ
# ವಿವಾಹ್
ಆನಂದದ ಆಲ್ಬಂ
ಬುಧವಾರ 13.09.2017



ಅತಿಯಾದ ನಿರೀಕ್ಷೆಯಿಂದಲೇ ಸರಳ ಸಂಬಂಧಗಳು ಜಟಿಲವಾಗಿ ಸಾಯುವುದು.

- ಅನಾಮಿಕ

ಅದ್ಹೇಗೆ 65 ವರ್ಷ ಜತೆಗೇ ಇದ್ದಿರಿ ಎಂದು ಕೇಳುತ್ತಾರೆ. ಅವರಿಗೆ ನೆನಪಿಲ್ಲ ನಾವು ಏನಾದರೂ ಮುರಿದರೆ ಎಸೆದು ಹೊಸತನ್ನು ಕೊಳ್ಳುವ ಕಾಲದವರಲ್ಲ; ಅದನ್ನು ರಿಪೇರಿ ಮಾಡಿಕೊಳ್ಳುವ ಕಾಲದವರೆಂದು.

- ಹಳೆ ಮಂದಿ

ಗೌರವವಿಲ್ಲದಿದ್ದರೆ ಪ್ರೀತಿ ಎಂಬುದು ಕೇವಲ ಪದ ಮಾತ್ರ.

-ನಿಖಿಲ್ ಸಲುಜಾ

Ravi®
The Most Trusted Household Name Since 1966
• Spices
• Masala Powders
• Pickles
• Hair Care Products
ಮಸಾಲೆ ಪದಾರ್ಥಗಳು:
ಅರಿಶಿನ ಪುಡಿ, ಮೆಣಸಿನಕಾಯಿ ಪುಡಿ, ಧನಿಯಾ ಪುಡಿ, ಕಾಳುಮೆಣಸಿನ ಪುಡಿ, ಜೀರಿಗೆ ಪುಡಿ, ಸಾಂಬಾರ್ ಪುಡಿ, ರಸಂ ಪುಡಿ, ಗರಂ ಮಸಾಲಾ ಪುಡಿ, ವಾಂಗಿಬಾತ್ ಪುಡಿ, ಬಿಸಿಬೇಳೆಬಾತ್ ಪುಡಿ ಮತ್ತು ಪುಳಿಯೋಗರೆ ಪುಡಿ



Buy online in amazon
ಉಪ್ಪಿನಕಾಯಿಗಳು:
ಮಾವಿನ ಕಾಯಿ, ನಿಂಬೆ, ಹೇರಳೆ ಕಾಯಿ, ಮಿಕ್ಸೆಡ್.
ರವಿ ಪ್ರಾಡಕ್ಟ್ಸ
ನಂ.74/1, 3ನೇ ಮುಖ್ಯ ರಸ್ತೆ, ಹೊಸ ತರಗುಪೇಟೆ, ಬೆಂಗಳೂರು-560002
info@raviproducts.in.
www.raviproducts.in.
ಸಂಪರ್ಕಿಸಿ: 98801 41188
ಯಾವುದೇ ರೀತಿಯ ಕೃತಕ ಬಣ್ಣ ಹಾಗೂ ಪರಿಮಳವನ್ನು ಬಳಸದೇ, ಸಾಂಪ್ರದಾಯಿಕ ಶೈಲಿಯಲ್ಲಿ ತಯಾರಾದ ರವೀ ಮಸಾಲೆ ಪದಾರ್ಥಗಳು • ನಿಮ್ಮ ಅಡುಗೆಯ ರುಚಿಯನ್ನು ಹೆಚ್ಚಿಸುವುದು.

# ನಿಮ್ಮ ವಿವಾಹಕ್ಕೊಂದು ದಾಖಲೆ ಇರಲಿ

• ಶ್ವೇತಾ ಕೆ.ಪಿ.

**ಘಟನೆ 1**

ನಮಗೆ ಒಬ್ಬಳೇ ಮಗಳು. ಆರ್ಥಿಕವಾಗಿ ಅಷ್ಟೇನೂ ಸಬಲವಾಗಿಲ್ಲದಿದ್ದರೂ ಅವಳ ಆರೈಕೆಯಲ್ಲಿ ಮಾತ್ರ ಯಾವುದೇ ರೀತಿಯ ಕುಂದುಕೊರತೆ ಮಾಡಿರಲಿಲ್ಲ. ಮುದ್ದಾಗಿಯೇ ಸಾಕಿದ್ದೆವು. ಅವಳನ್ನು ಚೆನ್ನಾಗಿ ಓದಿಸಿ ಉನ್ನತ ಹುದ್ದೆಯಲ್ಲಿ ಅಲಂಕರಿಸುವಂತೆ ಮಾಡ ಬೇಕೆಂಬುದು ನಮ್ಮ ಹೆಬ್ಬಯಕೆ. ಅದರಂತೆ ಸಾಲ-ಸೋಲ ಮಾಡಿ ಪ್ರತಿಷ್ಠಿತ ಕಾಲೇಜಿನಲ್ಲಿ ಸೇರಿಸಿದೆವು. ಅವಳೂ ಪ್ರಾರಂಭದಲ್ಲಿ ಚೆನ್ನಾಗಿ ಓದುತ್ತಿದ್ದಳು. ಬರುಬರುತ್ತಾ ಓದಿನಲ್ಲಿ ಹಿಂದುಳಿದಳು. ಬಳಿಕ ಅವಳ ನಡವಳಿಕೆಯಲ್ಲಿ ಸಾಕಷ್ಟು ಬದಲಾವಣೆಗಳು ಗೋಚರಿಸಿದವು. ಕಾರಣವನ್ನರಿಯಲು ಯತ್ನಿಸಿದಾಗ ಜೀರ್ಣಿಸಿಕೊಳ್ಳಲಾಗದ ಸತ್ಯ ಬಯಲಾಯಿತು. ಯಾರೋ ಅಸ್ವಾಮಿನವನಂತೆ. ಅವನೊಂದಿಗೆ ಪ್ರೀತಿ-ಪ್ರೇಮದ ಗೋಜಿಗೆ ಸಿಲುಕಿ ಸುಧಾರಿಸಲಾಗದಂಥ ತಪ್ಪನ್ನು ಎಸಗಿದ್ದಳು. ಈ ವಿಷಯ ತಿಳಿದು ನಿಂತ ನೆಲವೇ ಕುಸಿದಂತಾಯಿತು. ತರಾತುರಿಯಲ್ಲಿ ಹುಡುಗನ ಮನವೊಲಿಸಿ ಯಾರಿಗೂ ತಿಳಿಯದಂತೆ ಮನೆಯಲ್ಲೇ ಮಗಳ ಕುತ್ತಿಗೆಗೆ ತಾಳಿ ಕಟ್ಟಿಸಿದೆವು. ಎಲ್ಲವೂ ಸರಿ ಹೋಯಿತಲ್ಲಾ ಎಂದು ನಿಟ್ಟಿಸಿರು ಬಿಡುವಷ್ಟರಲ್ಲಿ ಆ ಹುಡುಗ ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದ. ಒಂದು ವಾರದ ಬಳಿಕ ತಿಳಿಯಿತು ಅವನು ಇನ್ನೊಂದು ಹುಡುಗಿಯನ್ನು ವರಿಸಿದ್ದಾನೆ ಎಂದು. ಅವನ ವಿರುದ್ಧ ಪ್ರಕರಣ ದಾಖಲಿಸೋಣ ಎಂದರೆ ನಮ್ಮ ಮಗಳ ಜತೆ ಮದುವೆ ಆಗಿರುವುದಕ್ಕೆ ಮದುವೆ ಪ್ರಮಾಣಪತ್ರ, ಫೋಟೋ ಸೇರಿ ಯಾವುದೇ ಪುರಾವೆಗಳಿರಲಿಲ್ಲ. ಮಗಳ ಜೀವನ ಹಾಳಾಯಿತಲ್ಲ ಎಂದು ಕೊರಗಿ ಕೊರಗಿ ಅವರ ತಂದೆಯೂ ಕೊನೆಯುಸಿರೆಳೆದರು.

**-ಸುಲೋಚನಾ, ಹುಡುಗಿಯ ತಾಯಿ (ಹೆಸರು ಬದಲಾಯಿಸಿದೆ)**

**ಘಟನೆ 2**

ನನ್ನ ಸಹೋದ್ಯೋಗಿಯೊಂದಿಗೆ ಪ್ರೇಮಾಂಕುರ ವಾಯಿತು. ಆದರೆ, ಅಡವನನ್ನ ವರಿಸಲು ಮನೆಯಲ್ಲಿ ಒಪ್ಪಿಗೆ ಸಿಗಲಿಲ್ಲ. ಅವನಿಗೆ ವಿದೇಶದಲ್ಲಿ ಕೆಲಸ ಸಿಕ್ಕಿತು. ನಮ್ಮ ಮನೆಯಲ್ಲಿ ನನಗೆ ನಮ್ಮ ಮಾವನ ಮಗನೊಂದಿಗೆ ವಿವಾಹ ನಿಶ್ಚಯಿಸಲು ತಯಾರಿ ನಡೆಸುತ್ತಿದ್ದರು. ಅದನ್ನು ಅವನಿಗೆ ತಿಳಿಸುವ ಹೊತ್ತಿಗೆ ಇನ್ನು ಒಂದು ವಾರದೊಳಗೆ ವಿದೇಶಕ್ಕೆ ಹಾರಲು ಸಜ್ಜುಗೊಳ್ಳುತ್ತಿದ್ದ. ಅಷ್ಟರೊಳಗೆ ನನಗೆ ತಾಳಿ ಕಟ್ಟಿಬಿಡು ಎಂದು ಪಟ್ಟು ಹಿಡಿದೆ. ತರಾತುರಿಯಲ್ಲಿ ಯಾರಿಗೂ ತಿಳಿಯದಂತೆ ಮದುವೆ ಮಾಡಿಕೊಂಡೆ. ನನಗೆ ಹೆಚ್ಚು ರಜೆ ಇಲ್ಲ ಕೂಡಲೇ ಹೊರಡಬೇಕು. ಮುಂದಿನ ಬಾರಿ ಬಂದಾಗ ವೀಸಾ ಎಲ್ಲಾ ಮಾಡಿಸಿ ನಿನ್ನ ಮನೆಯಲ್ಲಿ ತಿಳಿಸಿ ನಿನ್ನನ್ನು ಕರೆದೊಯ್ಯುವೆ ಎಂದು ಹೇಳಿ ಹೊರಟು ಹೋದ. ಮನೆಯಲ್ಲಿ ವಿಷಯ ತಿಳಿದು ಮರ್ಯಾದೆ ತೆಗೆದೆಳೆಂದು ಮನೆಯಿಂದ ಹೊರ ತಳ್ಳಿದರು. ಹದಿನೈದು ದಿನದ ಬಳಿಕ ಕಾರು ಅಪಘಾತದಲ್ಲಿ ಮೃತಪಟ್ಟ ಎಂಬ ವಿಷಯ ಅವನ ಸ್ನೇಹಿತನಿಂದ ತಿಳಿಯಿತು. ನನ್ನ ಜೀವನದ ದೋಣಿಗೆ ನಾವಿಕನಿಲ್ಲದಂತಾದ. ಇತ್ತ ಪೋಷಕರೂ ಇಲ್ಲ, ಅತ್ತ ತಾಳಿ ಕಟ್ಟಿದವನೂ ಇಲ್ಲ. ಜೀವ ನೋಪಾಯಕ್ಕೆ ಏನು ಮಾಡಬೇಕೆಂಬುದೇ ತಿಳಿಯದಂತಾದೆ. ಗಂಡನ ಆಸ್ತಿ ಕೇಳುವುದಕ್ಕೂ ನನ್ನ ಬಳಿ ಸಾಕ್ಷಿಯಾಗಿ ನೀಡಲು ನಾವಿನ್ನೂ ವಿವಾಹ ಪ್ರಮಾಣಪತ್ರ ಮಾಡಿಸಿರಲಿಲ್ಲ. ಇತ್ತ ಅವನ ಪೋಷಕರ ಬಳಿ ಮೊರೆಯಿಟ್ಟರೂ ಕರಗಲಿಲ್ಲ. ಮಾಡಿದುಣ್ಣೋ ಮಹರಾಯ ಎಂಬಂತಾಯಿತು ನನ್ನ ಸ್ಥಿತಿ.

**-ಪ್ರೇರಣ( ಹೆಸರು ಬದಲಾಯಿಸಿದೆ)**

ಸತ್ಯಕಥೆಯನ್ನಾಧರಿಸಿದ ಈ ಎರಡು ನಿದರ್ಶನಗಳನ್ನು ಓದಿದ ಮೇಲೆ ಈ ಲೇಖನ ಯಾವ ವಿಚಾರದ ಬಗ್ಗೆ ಬೆಳಕು ಚೆಲ್ಲಲಿದೆ ಎಂಬುದನ್ನು ನೀವು ಈಗಾಗಲೇ ಊಹಿಸಿರುತ್ತೀರಿ. ಹೌದು ' ಮದುವೆ ಪ್ರಮಾಣಪತ್ರ'ದ ಬಗ್ಗೆಯೇ. ಅದರಲ್ಲೇನು ಮಹತ್ವ ಇದೆ. ನಮ್ಮ ಅಪ್ಪ-ಅಮ್ಮ ಏನು ಈ ಪ್ರಮಾಣಪತ್ರ ಮಾಡಿಸಿದ್ರಾ? ನಾವೂ ಆ ಪ್ರಮಾಣಪತ್ರವಿಲ್ಲದೇ ಸಂಸಾರ ನಡೆಸುತ್ತಿಲ್ವಾ? ಈಗ್ಯಾಕೆ ಪ್ರಮಾಣಪತ್ರ ಮಾಡಿಸಿ ಎಂದು ದುಂಬಾಲು ಬಿದ್ದೀರಿ ಎಂದು ನೀವು ಸಿಡಿಮಿಡಿಗೊಂಡರೂ ಚಿಂತೆಯಿಲ್ಲ. ಹೇಳಬೇಕಾದ್ದ ಒಂದಷ್ಟು ವಿಚಾರಗಳನ್ನು ಹೇಳಿಯೇ ತೀರುವೆ. ಓದಿದ ಮೇಲೆ ನಿಮಗೆ ತಿಳಿಯಲಿದೆ ಮದುವೆ ಪ್ರಮಾಣಪತ್ರದ ಗತ್ತು, ಗಮ್ಮತ್ತು, ಕರಾಮತ್ತು.

## ಏನಿದು ಮದುವೆ ಪ್ರಮಾಣ ಪತ್ರ?

ಹಿಂದಿನ ಕಾಲದಲ್ಲಿ ಮದುವೆ ಅನ್ನೋದು ನಂಬಿಕೆಯ ತಳಹದಿ ಮೇಲೆ ಭದ್ರಗೊಂಡಿತ್ತು. ಹಿರಿಯರು ವಧು-ವರರ ಮನೆತನ, ನಡೆವಳಿಕೆಯನ್ನು ಎಲ್ಲವನ್ನೂ ಪರಿಶೀಲಿಸಿ ವಿವಾಹಕ್ಕೆ ಒಪ್ಪಿಗೆ ಸೂಚಿಸುತ್ತಿದ್ದರು. ಈಗ ಏನಿದ್ರು ತಮಗಿಷ್ಟದವರನ್ನು ವರಿಸುವ ಕಾಲ. ಕೃತಕ ಪ್ರೀತಿಗೆ ಮನಸೋತು ನಯವಂಚಕರ ಬಲೆಗೆ ಸಿಲುಕಿ ಬೀದಿಪಾಲಾದವರೇ ಹೆಚ್ಚು. ಈ ರೀತಿ ಆಗಬಾರದೆಂದೇ ಮಹಿಳಾ ಸುರಕ್ಷಣೆಯನ್ನು ಮನಗೊಂಡ ಸುಪ್ರೀಂ ಕೋರ್ಟ್ 2006ರಲ್ಲಿ ಮದುವೆ ನೋಂದಣಿನ್ನು ಕಡ್ಡಾಯಗೊಳಿಸಿತು. ಸಂಪ್ರದಾಯವಾಗಿ ಹಿರಿಯರ ಸಮ್ಮುಖದಲ್ಲಿ ಸಪ್ತಪದಿ ತುಳಿದರೂ, ಪ್ರೇಮವಿವಾಹವಾದರೂ ಆ ಜೋಡಿ ದಾಂಪತ್ಯ ಜೀವನಕ್ಕೆ ಒಳಪಟ್ಟಿದೆ ಎಂಬುದನ್ನು ಕಾನೂನಿನಡಿ ನೋಂದಾಯಿಸಿ ಸರಕಾರದಿಂದ ನೀಡುವ ದೃಢೀಕರಣ ಪತ್ರವೇ 'ಮದುವೆ ಪ್ರಮಾಣ ಪತ್ರ'.

## ಮದುವೆ ಪ್ರಮಾಣ ಪತ್ರ ಎಲ್ಲಿ, ಹೇಗೆ ಮಾಡಿಸಬೇಕು?

ನೀವು ವಾಸಿಸುತ್ತಿರುವ ಬಡಾವಣೆ ಅಥವಾ ನಗರದ ವ್ಯಾಪ್ತಿಗೆ ಬರುವ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಮದುವೆ ಪ್ರಮಾಣಪತ್ರವನ್ನು ಪಡೆಯಬಹುದಾಗಿದೆ. ಇದರಲ್ಲೂ ಹಿಂದೂ ಮದುವೆ ಕಾಯಿದೆ 1955( ಹಿಂದೂಗಳ ನಡುವಿನ ವಿವಾಹ) ಅಥವಾ ವಿಶೇಷ ಮದುವೆ ಕಾಯಿದೆ 1954ರ (ಅಂತರ್ಜಾತಿ ವಿವಾಹ) ಅನ್ವಯ ವಿವಾಹವನ್ನು ನೋಂದಾಯಿಸಬಹುದು. ಮೊದಲೇ ಹಿಂದೂ ವಿವಾಹ ಕಾಯಿದೆಯಡಿ ಸಪ್ತಪದಿ ತುಳಿದವರು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಅರ್ಜಿಯನ್ನು ಪಡೆದು, ಪತಿ-ಪತ್ನಿ ಹಸ್ತಾಕ್ಷರ ಸಮೇತ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಬೇಕು. ಜತೆಗೆ ಅಗತ್ಯ ದಾಖಲೆಗಳನ್ನು ನೀಡಿ ಒಂದೇ ದಿನದಲ್ಲಿ ಪ್ರಮಾಣಪತ್ರ ಪಡೆಯಬಹುದು. ಅಥವಾ ವಿವರವನ್ನು ಆನ್‌ಲೈನ್‌ನಲ್ಲಿ ಭರ್ತಿಗೊಳಿಸಿ ಸಬ್ ರಿಜಿಸ್ಟ್ರಾರ್ ಕಚೇರಿ ಯಲ್ಲಿ ಪ್ರಮಾಣ ಪತ್ರವನ್ನು ಪಡೆಯಬಹುದು. ವಿಶೇಷ ಮದುವೆ ಕಾಯ್ದೆಯಡಿ ವಿವಾಹವಾಗುವವರು ತಮ್ಮ ಬಡಾವಣೆಯ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿ ಅಗತ್ಯ ದಾಖಲೆ ಗಳೊಂದಿಗೆ ಸಲ್ಲಿಸಬೇಕು. ನೋಟಿಸ್ ಅವಧಿ ಎಂದು ಫೋಟೋ ಸಮೇತ ವಿವರವನ್ನು ಕಚೇರಿಯ ನೋಟೀಸ್ ಬೋರ್ಡ್ ಮೇಲೆ ಹಾಕಿ 30 ದಿನಗಳ ಗಡುವು ನೀಡ ಲಾಗುವುದು. ಯಾವುದೇ ಆಕ್ಷೇಪಗಳು ಬರದಿದ್ದರೆ 90 ದಿನಗಳೊಳಗೆ ಸಾಕ್ಷಿದಾರರ ಸಹಿಯೊಂದಿಗೆ ವಧು-ವರರ ಹಸ್ತಾಕ್ಷರ ಹಾಕಿಸಿಕೊಂಡು ಪ್ರಮಾಣಪತ್ರ ನೀಡಲಾಗುವುದು. ಒಂದು ವೇಳೆ ನಿಗದಿತ ಅವಧಿಯೊಳಗೆ ವಧು-ವರ ಕಚೇರಿಗೆ ಹಾಜರಾಗದಿದ್ದರೆ ವಿವಾಹ ರದ್ದುಗೊಳ್ಳುತ್ತದೆ. ಯಾರಪ್ಪ ಅಷ್ಟು ದೂರ ಹೋಗಿ ಅಷ್ಟು ಹೊತ್ತು ಸರತಿಯಲ್ಲಿ ನಿಂತು ಅರ್ಜಿ ಪಡೆದು ಅದಕ್ಕಾಗಿಯೇ ಒಂದು ದಿನ ಮೀಸಲಿಡಬೇಕಾ ಎಂದು ಅಸಡ್ಡೆ ಮನೋಭಾವ ತಾಳಿದರೆ ಮುಂದೆ ಸಂಕಷ್ಟದ ದಿನಗಳನ್ನು ಎದುರಿಸಬೇಕಾದೀತು. ಹಾಗೆ ಆಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ನಿಮ್ಮ ಮದುವೆಯನ್ನು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾಯಿಸಿಕೊಂಡು ಮದುವೆ ಪ್ರಮಾಣಪತ್ರವನ್ನು ಪಡೆದುಕೊಂಡರೆ ಮುಂದಾಗುವ ಅನಾಹುತಗಳನ್ನು ತಪ್ಪಿಸಬಹುದು. ಜತೆಗೆ ನಿಮ್ಮ ವೈವಾಹಿಕ ಬದುಕಿಗೊಂದು ಭದ್ರತೆ ಕಲ್ಪಿಸದಂತಾಗುತ್ತದೆ.



ನೂರು ಮಂದಿ ಮುಂದೆ ತಾಳಿ ಕಟ್ಟಿದ್ರೂ ಅದಕ್ಕೊಂದು ದಾಖಲೆ ಬೇಕಾ ಅಂತಾ ಹುಬ್ಬೇರಿಸದಿರಿ. ವಂಚನೆ ಎಂಬ ಬಿಸಿಲು ನಮ್ಮ ಮೇಲೆ ಬೀಳಬಾರದೆಂದರೆ ಕಾನೂನಿನ ನೆರಳಲ್ಲೇ ನಿಲ್ಲಬೇಕು. ಅದಕ್ಕಾಗಿಯೇ ನಿಮ್ಮ ವಿವಾಹಕ್ಕೂ ಒಂದು ಪ್ರಮಾಣ ಪತ್ರ ಇರಲಿ.

> ಮೊದಲೆಲ್ಲಾ ವಿವಾಹ ಪ್ರಮಾಣಪತ್ರ ಇಲ್ಲದಿದ್ದರೂ ಫೋಟೋ ಇದ್ದರೆ ಸಾಕಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ತಾಂತ್ರಿಕತೆ ಸಹಾಯದಿಂದ ತಮಗೆ ಬೇಕಾದ ರೀತಿಯಲ್ಲಿ ಫೋಟೋಶಾಪ್ ಮಾಡಿಸಿಕೊಳ್ಳಬಹುದು. ಜತೆಗೆ ಎರಡು ಮೂರು ಮದುವೆ ಕೂಡಾ ಆಗಿರುತ್ತಾರೆ. ಹಾಗಾಗಿಯೇ ಮದುವೆಗೆ ಅಧಿಕೃತ ದಾಖಲೆ ಇರಲೇಬೇಕು ಎಂದು ನ್ಯಾಯಾಲಯ ಆದೇಶಿಸಿರುವುದು. ಇದು ವಂಚನೆ ವಿರುದ್ಧ ಹೋರಾಡಲು ಪ್ರಬಲ ಅಸ್ತ್ರಕೂಡಾ.
>
> **-ಅನಿಲ್ ಕುಮಾರ್**
> **ವಕೀಲರು**

> ವಿವಾಹ ಪ್ರಮಾಣಪತ್ರ ಇಲ್ಲದಿದ್ದರೂ ನಡೆಯುತ್ತೆ ಎಂಬ ಅಲಕ್ಷ್ಯ ತೋರುವಂತಿಲ್ಲ. ಈಗ ವೀಸಾ, ವಿಚ್ಛೇದನ, ಆಸ್ತಿ ಪಡೆಯಲು ಎಲ್ಲಾದಕ್ಕೂ ಮದುವೆ ಪ್ರಮಾಣಪತ್ರ ಕಡ್ಡಾಯವಾಗಿದೆ. ಇದಕ್ಕೆ ಮೊದಲಿನಂತೆ ಹೆಚ್ಚಿನ ಸಮಯ ಮುಡಿಪಾಗಿಡುವ ಅಗತ್ಯವಿಲ್ಲ. ಒಂದೇ ದಿನದಲ್ಲಿ ಪ್ರಮಾಣ ಪತ್ರ ಪಡೆಯಬಹುದು. ಜತೆಗೆ ಆನ್ ಲೈನ್‌ನಲ್ಲಿ ಕೂಡಾ ವಿವರಗಳನ್ನು ಭರ್ತಿಗೊಳಿಸಿ ಕಚೇರಿಗೆ ಬಂದು ಪತಿ-ಪತ್ನಿ ರುಜು ಮಾಡಿ ವಿವಾಹ ನೋಂದಾಯಿಸಬಹುದು.
>
> **-ಉಪನೋಂದಣಾಧಿಕಾರಿ.**
> **ರಾಜರಾಜೇಶ್ವರಿ ನಗರ, ಬೆಂಗಳೂರು**







## ವಿವಾಹ ನೋಂದಣಿಗೆ ಬೇಕಾದ ದಾಖಲೆಗಳು

- ಕಾನೂನಿನ ಪ್ರಕಾರ ಮದುವೆ ಆಗಲು ಗಂಡಿಗೆ 21 ವರ್ಷ ಮತ್ತು ಹೆಣ್ಣಿಗೆ 18 ವರ್ಷ ಆಗಿರಲೇಬೇಕು. ಹಾಗಾಗಿ ವಧು-ವರರ ವಯಸ್ಸನ್ನು ದೃಢೀಕರಿಸುವ ಜನನ ಪ್ರಮಾಣ ಪತ್ರ ಅಥವಾ ಆಧಾರ್ ಕಾರ್ಡ್, ಎಸ್ಸೆಸ್ಸೆಲ್ಸಿ ಅಂಕಪಟ್ಟಿ ಕಡ್ಡಾಯವಾಗಿ ಸಲ್ಲಿಸಬೇಕು.
- 6 ಪಾಸ್‌ಪೋರ್ಟ್ ಸೈಜಿನ ಫೋಟೋ ಅಥವಾ ಮದುವೆ ಫೋಟೋ.
- ಮದುವೆಯ ಕರೆಯೋಲೆ.
- ಮದುವೆಗೆ ಹಾಜರಾಗಿದ್ದ ಯಾವುದೇ ವ್ಯಕ್ತಿಯ ಸಾಕ್ಷಿ ಇರಬೇಕು.
- 3 ಅರ್ಜಿಯಲ್ಲೂ ಸಾಕ್ಷಿಗಳ ಹಸ್ತಾಕ್ಷರ ಇರಬೇಕು. ಸಾಕ್ಷಿದಾರರು ಪ್ರೌಢರಾಗಿರಬೇಕು. ಅವರ ವಿಳಾಸ ದೃಢೀಕರಿಸುವ ಪತ್ರ ಸಲ್ಲಿಸಬೇಕು.
- ವಧು-ವರರ ವಿಳಾಸ ದೃಢೀಕರಿಸುವ ಆಧಾರ್ ಕಾರ್ಡ್, ರೇಶನ್ ಕಾರ್ಡ್ ಹಸ್ತಾಕ್ಷರ ಹಾಕಿ ಸಲ್ಲಿಸಬೇಕು.
- ವ್ಯಕ್ತಿ ನಿರಂತರವಾಗಿ ಬುದ್ಧಿಭ್ರಮಣೆಗೆ ಒಳಗಾಗುತ್ತಿದ್ದರೆ ಅಂತಹ ಮದುವೆ ಅನೂರ್ಜಿತಗೊಳ್ಳುತ್ತದೆ.
- ಮೊದಲ ಪತ್ನಿ ಇರುವಾಗಲೇ ಎರಡನೇ ವಿವಾಹವಾಗುವಂತಿಲ್ಲ.

## ಪ್ರಯೋಜನಗಳು

- ಪತಿಯ ಸಾವಿನ ಬಳಿಕ ಆಸ್ತಿಗೆ ಪತ್ನಿ ಉತ್ತರಾಧಿಕಾರಿಯಾಗಲು ಮದುವೆ ಪ್ರಮಾಣಪತ್ರ ಅಗತ್ಯವಾಗಿರುತ್ತದೆ.
- ಸಂಬಂಧದಲ್ಲಿ ಬಿರುಕು ಬಿಟ್ಟು ವಿಚ್ಛೇದನಕ್ಕಾಗಿ ಕೋರ್ಟ್ ಮೆಟ್ಟಿಲೇರುವಾಗ ವಿವಾಹ ಪ್ರಮಾಣಪತ್ರ ಅಗತ್ಯ.
- ವಿಧವೆ-ವಿಧುರ ಅಥವಾ ವಿಚ್ಛೇದನ ಪಡೆದವರು ಮರುಮದುವೆ ಆಗುವ ಸಂದರ್ಭದಲ್ಲಿ ಕಡ್ಡಾಯವಾಗಿ ವಿವಾಹ ಪ್ರಮಾಣಪತ್ರ ನೀಡಬೇಕು.
- ಮದುವೆ ಬಳಿಕ ಪತ್ನಿ ಅಧಿಕೃತವಾಗಿ ಹೆಸರು ಬದಲಿಸಿಕೊಳ್ಳಬೇಕಾದಲ್ಲಿ ಮದುವೆ ಪ್ರಮಾಣಪತ್ರ ಅವಶ್ಯಕವಾಗಿರುತ್ತದೆ.
- ಪತಿಯ ಜೀವ ವಿಮೆಗೆ ಪತ್ನಿ ನಾಮಿನಿಯಾಗಿದ್ದರೆ ಅವರ ಪತ್ನಿ ಜೀವ ವಿಮೆ ರಿಟರ್ನ್ಸ್ ಪಡೆಯಲು ಪ್ರಮಾಣಪತ್ರ ಅವಶ್ಯಕ.
- ಪತಿ-ಪತ್ನಿ ವಿದೇಶಕ್ಕೆ ತೆರಳುವುದಕ್ಕೆ ವೀಸಾ ಪಡೆಯಲು ನೆರವಾಗಲಿದೆ.
- ಶಾದಿಭಾಗ್ಯ ಸರಕಾರಿ ಯೋಜನೆಯ ಸೌಲಭ್ಯ ಪಡೆಯಲು ಪ್ರಮಾಣ ಪತ್ರ ಅವಶ್ಯಕವಾಗಿರುತ್ತದೆ.
- ರಾಜ್ಯಸರಕಾರದ ಭಾಗ್ಯಲಕ್ಷ್ಮೀ ಯೋಜನೆಯಲ್ಲಿ ಮಕ್ಕಳಿಗೆ ಸೌಲಭ್ಯ ಪಡೆಯಲು ಪ್ರಮಾಣಪತ್ರ ಪಡೆದಿರಬೇಕು.



